# ಪ್ರಥಮ ದರ್ಜೆ  ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ

**ಸಿ.ಸಿ. ನಂಃ 137/2021**

**ಡಿ.ಡಬ್ಲ್ಯೂಃ 01**

ಸಾಕ್ಷಿದಾರರ ಹೆಸರುಃ ಶಮ್‌ಂಶುದ್ಧಿನ ರಾಜೇಶ್ ಸಾಬ್ ಮಾಳ್ಯಾಕೊಪ್ಪ
ವಯಸ್ಸುಃ **38** ವರ್ಷ
ಉದ್ಯೋಗಃ ಶೇತ್ಕಿ
ಸಾಕೀನಃ ಬರದೂರು ಗ್ರಾಮ, ಮುಂಡರಗಿ ತಾಲೂಕು.

**ದಿಃ 14-02-2023 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಆರೋಪಿಪರ ಶ್ರೀ. M.V.R ವಕೀಲರವರಿಂದಃ**

ಪಿರ್ಯಾದಿಯ ಪರಿಚಯ ನನಗೆ ಇರುವುದಿಲ್ಲ. ನಾನು ಮತ್ತು ವಿಜಯ ಎಂಬುವವರು ಜೆ.ಸಿ.ಬಿ ವಿಷಯವಾಗಿ ವ್ಯವಹಾರ ಮಾಡಿರುತ್ತೇವೆ. ಸದರಿ ವ್ಯವಹಾರ ಮುಗಿದ ನಂತರ ನಾನು ಅವರಿಗೆ 1 ಲಕ್ಷ ರೂಪಾಯಿಗಳನ್ನು ಮರಳಿ ಪಾವತಿಸಿರುತ್ತೇನೆ. ವ್ಯವಹಾರ ಮಾಡುವಾಗ ನಾನು ಅವರಿಗೆ 2 ಚೆಕ್ಕು ಮತ್ತು 1 ಬಾಂಡ್ ಬರೆದು ಕೊಟ್ಟಿದ್ದೇನು. ವ್ಯವಹಾರ ಮುಗಿದ ನಂತರ ನಾನು ಸದರಿ ಚೆಕ್ಕ್ ಗಳನ್ನು ಹಿಂತಿರುಗಿ ತೆಗೆದುಕೊಂಡಿರುವುದಿಲ್ಲ. ಈಗ ಪಿರ್ಯಾದಿ ಸದರಿ ಚೆಕ್ಕುಗಳನ್ನು ತೆಗೆದುಕೊಂಡು ಈ ಪ್ರಕರಣವನ್ನು ಹೂಡಿರುತ್ತಾರೆ.

**2.** ವಿಜಯ ಎಂಬುವವರು ನಮ್ಮ ಜೆಸಿಬಿ ಯಲ್ಲಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದರು. ನನ್ನ ಮತ್ತು ವಿಜಯ ನಡುವೆ ಸಾಕಷ್ಟು ವ್ಯವಹಾರಗಳು ಇದ್ದವು. ನನ್ನ ಮತ್ತು ಪಿರ್ಯಾದಿಯ ಮಧ್ಯೆ ಯಾವುದೇ ವ್ಯವಹಾರ ಆಗಿರುವುದಿಲ್ಲ. ಆದ್ದರಿಂದ ಈ ಪ್ರಕರಣವನ್ನು ವಜಾ ಮಾಡಿ ಎಂದು ಕೋರುತ್ತೇನೆ.

ಪಾಟಿ ಸವಾಲುಃ ಪಿರ್ಯಾದಿಪರ ವಕೀಲರಿಂದಃ

ಪಿರ್ಯಾದಿ ಪರ ವಕೀಲರು ಪಾಟೀಸವಾಲಿಗೆ ಸಮಯಾವಕಾಶ ಕೇಳಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ, "ನನ್ನ ಸಮಕ್ಷಮ"

(ವೀರೇಶ ಕುಮಾರ ಸಿ.ಕೆ.)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಹಡಗಲಿ.